| |
|---|
| Deposition Sheets (RP.No.57) Form No.4 |

IN THE COURT OF PRL. CIVIL JUDGE & J.M.F.C., KARKALA.

Criminal Case No. 536/2024

ಸಾಕ್ಷಿದಾರರ ಹೆಸರು ಃ ಮಂಜುನಾಥ ಗೌಡ ಪಿ.ಡಬ್ಲ್ಯೂಃ 1

ತಂದೆ/ಗಂಡನ ಹೆಸರುಃ ನಾರಾಯಣ ಹೆಚ್ ಗೌಡ ಸಿ.ಡಬ್ಲ್ಯೂಃ 1

ಪ್ರಾಯ ಃ 59 ವರ್ಷ

ಉದ್ಯೋಗ ಃ ಹೈಸ್ಕೂಲ್ ಟೀಚರ್, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಾರವಾಡ

ವಾಸ ಃ ಕುಮ್ಟ

ದಿನಾಂಕ 20-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಆರೋಪಿಯನ್ನು ನೋಡಿದರೆ ಗುರುತಿಸಬಹುದು. ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆರೋಪಿ ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಚಾಸಾ-2 ರಿಂದ 4, 8 ರಿಂದ 11 ಪರಿಚಯ ಇದೆ. ಚಾಸಾ 2 ರಿಂದ 4 ನಮ್ಮ ಶಾಲೆಗೆ ವಿದ್ಯಾರ್ಥಿಗಳು, ಚಾಸಾ 8 ರಿಂದ 11 ಸಹೋದ್ಯೋಗಿಗಳು.

ದಿಃ 19-12-2023 ರಂದು ನಾವು ಎರಡು ದಿನಗಳ ಶಾಲಾ ಶೈಕ್ಷಣಿಕ ಪ್ರವಾಸಕ್ಕೆಂದು ಕೆ ಎಸ್ ಆರ್ ಟಿ ಸಿ ಬಸ್ಸು ನಂಬರ್ ಕೆಎ-31-ಎಸ್-1595 ರಲ್ಲಿ ಹಾರವಾಡ ಅಂಕೋಲದಿಂದ ಹೊರಟು ಉಡುಪಿಗೆ ಬಂದಿರುತ್ತೇವೆ. ಉಡುಪಿಯಿಂದ ಮಲ್ಪೆ ಬಿಚಿಗೆ ಹೋಗಿ ಅಲ್ಲಿಂದ ಕಾರ್ಕಳಕ್ಕೆ ಸಂಜೆ ಸುಮಾರಿಗೆ ಬಂದಿರುತ್ತೇವೆ. ಅಲ್ಲಿಂದ ವಾಪಾಸು ಉಡುಪಿಗೆ ಬಂದು ತಂಗುತ್ತೇವೆ. ಮರುದಿನ ಅಂದರೆ ದಿಃ 20-12-2023 ರಂದು ಬೆಳಿಗ್ಗೆ ನಾವು ಶೃಂಗೇರಿಗೆ ಹೋಗಿ ಅಲ್ಲಿಂದ ಹೊರನಾಡಿಗೆ ಹೋಗಿ ಅಲ್ಲಿಂದ ಕುದುರೆಮುಖ

ಮಾರ್ಗವಾಗಿ ಅಂಕೋಲಕ್ಕೆ ವಾಪಾಸ್ಸು ಹೋಗುತ್ತಿರುವಾಗ ಸುಮಾರು ಸಂಜೆ 5.15 ಕ್ಕೆ ಮಾಳದಲ್ಲಿ ನಾವು ಪ್ರಯಾಣಿಸುತ್ತಿದ್ದ ಬಸ್ಸನ್ನು ಅದರ ಚಾಲಕ ಅತೀವೇಗ ಹಾಗೂ ನಿರ್ಲಕ್ಷದಿಂದ ಚಲಾಯಿಸಿ ಮರಕ್ಕೆ ಡಿಕ್ಕಿ ಪಡಿಸಿರುತ್ತಾನೆ. ಅದರ ಪರಿಣಾಮ ಮೂರು ವಿದ್ಯಾರ್ಥಿಗಳಿಗೆ ಸದಾ ಸ್ವರೂಪದ ಗಾಯವಾಗಿರುತ್ತದೆ. ಬಸ್ಸು ಸ್ವಲ್ಪ ಮಟ್ಟಿಗೆ ಜಖಂ ಆಗಿರುತ್ತದೆ. ವಿದ್ಯಾರ್ಥಿಗಳನ್ನು ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿರುತ್ತೇವೆ. ಘಟನೆ ಕುರಿತು ದೂರು ನೀಡಿರುತ್ತೇವೆ.

ಸಾಕ್ಷಿಯು ಪಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಿರ್ಯಾದಿಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು 1(ಎ) ಎಂದು ಗುರುತಿಸಲಾಯಿತು.

ಕೆ ಎಸ್ ಆರ್ ಟಿ ಸಿ ಬಸ್ಸನ್ನು ನೋಡಿದರೆ ಗುರುತಿಸುತ್ತೇನೆ. ಬಸ್ಸು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ರಿಂದ 5 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದ ::

ಶೃಂಗೇರಿ ಹೊರನಾಡು ಘಾಟು ಪ್ರದೇಶವಾಗಿದ್ದು ಮಾರ್ಗ ಬಹಳಷ್ಟು ತಿರುವಿನಿಂದ ಕೂಡಿರುತ್ತದೆ. ಎರಡು ದಿನಗಳ ಪ್ರವಾಸಕ್ಕೆ ಆರೋಪಿ ಒಬ್ಬರೇ ಚಲಾಕರಾಗಿರುತ್ತಾರೆ. ಸರ್ಕಾರಿ ಬಸ್ಸಿನಲ್ಲಿ ವೇಗ ನಿಯಂತ್ರಣ ಅಳವಡಿಸುತ್ತಾರೆ ಎಂದರೆ ಸರಿ. ಈ ಬಸ್ಸಿನಲ್ಲಿ ಇತ್ತು ಎಂದರೆ ಇರಬಹುದು. ಅಪಘಾತ ಸಂಭವಿಸಿದ ರಸ್ತೆ ಕಿರಿದಾದ ರಸ್ತೆಯಾಗಿರುತ್ತದೆ. ನಾನು ಬಸ್ಸಿನ ಮಧ್ಯಭಾಗದಲ್ಲಿ ಕುಳಿತ್ತಿದ್ದೆ. ಬಸ್ಸಿನ ಮಧ್ಯಭಾಗದಲ್ಲಿ ಕುಳಿತ್ತಿದ್ದ ಕಾರಣ ಬಸ್ಸಿನ ಎದುರುಗಡೆ ಯಾವೆಲ್ಲಾ ವಾಹನಗಳು ಹೋಗಿರುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಬಸ್ಸಿನ ಎದುರುಗಡೆ ಒಂದು ಲಾರಿ ಅತೀವೇಗ ಹಾಗೂ ನಿರ್ಲಕ್ಷತನದಿಂದ ಬಂದ ಕಾರಣ ಅದನ್ನು ತಪ್ಪಿಸಲು ಹೋಗಿ ಆರೋಪಿ ಮರಕ್ಕೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತದಿಂದ ವಿದ್ಯಾರ್ಥಿಗಳಿಗೆ ಸಾದ

ಸ್ವರೂಪದ ಪೆಟ್ಟಾಗಿದ್ದು ಯಾರು ಮೃತಪಟ್ಟಿರುವುದಿಲ್ಲ ಎಂದರೆ ಸರಿ. ಲಾರಿ ಡಿಕ್ಕಿ ಪಡಿಸಿದ್ದಲ್ಲಿ ಹೆಚ್ಚು ಹಾನಿಯಾಗುವ ಸಂಭವ ಇತ್ತು ಎಂದರೆ ಇರಬಹುದು.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Learned APP filed memo praying to issue s/s to the other witnesses. As the eye witness Pw 1 have completly turned hostile to the case of prosecution. No purpose will be served by issuance of summons to other witnesses. Hence by rejecting the prayer of learned APP evidence of other witnesses are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed. Posted for compliance and Arguments.

Call on 20-02-2024.

Prl. Civil Judge & JMFC.
Karkala

Accused absent. E.P filed and allowed for a day. CW1 to 3 present and examined as PW1 to 3 and

got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly turned hostile to the case of prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for

compliance Under 437A and Arguments.

Call on : 17.08.2021

Prl. Civil Judge & JMFC.
Karkala